

# ಭೋಗ ಜಗತ್ತಿನ ಹಿಂದಿನ ಸುಡು ವಾಸ್ತವಗಳ ಮುಖಾಮುಖಿ

ಕನಸಿನ ಬೆನ್ನು ಬಿದ್ದು ವರ್ತಮಾನವನ್ನು ಗೊಂದಲವಾಗಿಸಿಕೊಂಡ ಸೋನಾಲಾಲ್‌ಗೆ ಗೆಳತಿ ಅಂಜಲಿ ದೇಸಾಯಿ ನೆನಪಿಗೆ ಬಂದಳು. ಒಮ್ಮೆ ಸೋನಾಲಾಲನ ಕ್ಲಾಸ್‌ಮೇಟ್ ಅಂಜಲಿ ದೇಸಾಯಿ ಪುಣೆಯಲ್ಲಿರುವ ತಮ್ಮ ಗೆಸ್ಟ್ ಹೌಸ್‌ಗೆ ಸೋನಾಲಾಲನನ್ನು ಆಹ್ವಾನಿಸಿದ್ದಳು. ಅಂದು ಅವಳು 'ಗೆಸ್ಟ್ ಹೌಸಿನಲ್ಲಿ ಒಂದು ದಿನ ಇದ್ದು ಬರೋಣ ಬಾ. ನಿನಗೆ ಅಲ್ಲಿ ನಿಜವಾದ ಪ್ಯಾರಡೈಸ್ ತೋರಿಸ್ತೀನಿ' ಎಂದು ಹೇಳಿದ ಮಾತುಗಳು ಮ್ಯಾಥ್ಯೂ ಅಲೆಗ್ಯಾಂಡರನ ಮಾತುಗಳಂತೆ ಸೋನಾಲಾಲನ ಕಿವಿಯನ್ನು ಅಪ್ಪಳಿಸಿದ್ದವು. ತಕ್ಷಣ ಅವಳ ಮಾತಿಗೆ ಒಪ್ಪಿಗೆಯನ್ನು ಸೂಚಿಸಿದನಾದರೂ ಹೊರಡಬೇಕೆಂದು ನಿಶ್ಚಯಿಸಿದ ದಿನ ಎಂಥದ್ದೋ ಅವ್ಯಕ್ತ ಭಯ ಉಂಟಾಗಿ ಸ್ಕೂಲಿಗೂ ಸಹ ಹೋಗದೆ ಮನೆಯಲ್ಲಿಯೇ ಉಳಿದುಬಿಟ್ಟ. ಮಾರನೆಯ ದಿನ ಅಂಜಲಿ ದೇಸಾಯಿ ಶಾಲೆಗೆ ಬಂದಿರಲಿಲ್ಲ. ಒಂದು ವಾರವಾದರೂ ಬರಲಿಲ್ಲ. ವಾರದ ನಂತರ ಯಾರೊ ಹ್ಯಾಂಡ್ಸಮ್ ಯುವಕನೊಬ್ಬನೊಂದಿಗೆ ಬಂದವಳು ತನಗೆ ಮ್ಯಾರೇಜ್ ಫಿಕ್ಸ್ ಆಗಿದೆಯೆಂದು ತರಗತಿಯಲ್ಲಿ ಎಲ್ಲರಿಗೂ ಇನ್ವಿಟೇಶನ್ ಕಾರ್ಡ್ ಕೊಟ್ಟಿದ್ದಳು. ಮದುವೆ ಇನ್ನೂ ಒಂದು ತಿಂಗಳು ಇತ್ತು. ಇನ್ವಿಟೇಶನ್ ಕೊಟ್ಟು ಹೋದ ವಾರದ ನಂತರ ಬಂದು ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಕ್ಲಾಸ್ ಟೀಚರೊಂದಿಗೆ ಐಸ್‌ಕ್ರೀಮ್ ಪಾರ್ಟಿ ಕೊಡಿಸಲು ತಾಜ್ ಹೋಟೆಲ್ಲಿಗೆ ಕರೆದುಕೊಂಡು ಹೋಗಿದ್ದಳು. ತನ್ನ ಅಜ್ಜಿ ಕಾಯಿಲೆ ಬಿದ್ದು ಸೀರಿಯಸ್ ಆಗಿ ಇರುವುದಾಗಿಯೂ, ತನ್ನ ತಂದೆಗೆ ತಾನೊಬ್ಬಳೇ ಮಗಳಾಗಿರುವುದರಿಂದ ತನ್ನ ಅಜ್ಜಿ ತನ್ನ ಮದುವೆಯನ್ನು ನೋಡಲು ಇಷ್ಟಪಟ್ಟಿದ್ದರಿಂದ ತಾನು ಮದುವೆಗೆ ಒಪ್ಪಿಕೊಂಡಿರುವುದಾಗಿಯೂ, ಕ್ಲಾಸಿನ ಎಲ್ಲರನ್ನೂ ಬಹಳವಾಗಿ ಮಿಸ್ ಮಾಡಿಕೊಳ್ಳುತ್ತಿರುವುದರಿಂದ ಬಹಳ ದುಃಖವಾಗುತ್ತಿರುವುದಾಗಿಯೂ ಬೇಸರ ತೋಡಿಕೊಂಡಿದ್ದಳು.

ಐಸ್‌ಕ್ರೀಮ್ ತಿನ್ನುತ್ತಿದ್ದ ಸೋನಾಲಾಲನ ಪಕ್ಕದಲ್ಲಿ ಬಂದು ಕುಳಿತು 'ಯಾಕೊ ಸೋನಾ ಅವತ್ತು ಪೂನಾಕ್ಕೆ ಬರುವುದಾಗಿ ಹೇಳಿ ಕೈಕೊಟ್ಟೆ, ಒಳ್ಳೆ ಪುಕ್ಕಲ ಆಸಾಮಿ ನೀನು. ನನಗೆ ಎಷ್ಟು ನಿರಾಸೆ ಆಗಿತ್ತು ಗೊತ್ತಾ? ಅವತ್ತು ಬೇಸರ ಆಗಿ ತಿರುಗಾಡಿಕೊಂಡು ಬರಲು ಗ್ರಾಂಟ್ ರೋಡಿಗೆ ಹೋಗಿದ್ದೆ. ಅಲ್ಲಿ ಅಚಾನಕ್ಕಾಗಿ ಮಾಥ್ಯೂ ಅಲೆಗ್ಸಾಂಡರ್ ಸಿಕ್ಕಿದ. ಸ್ಕೂಲ್ ಬಿಟ್ಟು ಅವನು ತನ್ನ ತಂದೆಗೆ ವ್ಯಾಪಾರದಲ್ಲಿ ಅಸಿಸ್ಟ್ ಮಾಡ್ತಾ ಇದ್ದಾನಂತೆ. ನಿನ್ನ ಮೇಲಿನ ಕೋಪದಿಂದ ಅವನನ್ನು ಪೂನಾಕ್ಕೆ ಕರೆದೆ. ಅವನು ಒಪ್ಪಿಕೊಂಡ. ಮಾರನೇ ದಿನ ಪೂನಾಕ್ಕೆ ಹೋಗಿ ಎರಡು ದಿನ ಇದ್ದು ಬಂದ್ವಿ. ನೀನು ಬರದೆ ತಪ್ಪಿಸಿಕೊಂಡಿದ್ದು ಒಳ್ಳೆಯದೇ ಆಯ್ತು ಬಿಡು. ನಾನು ಪ್ಯಾರಡೈಸ್ ತೋರಿಸೋದು ಏನು, ಅಲೆಗ್ಸಾಂಡರನೇ ನನಗೆ ಎರಡು ದಿನ ಪೂರಾ ಸಖತ್ ಪ್ಯಾರಡೈಸ್ ತೋರಿಸಿಬಿಟ್ಟ' ಎಂದು ಮೆಲ್ಲನೆ ಹೇಳಿ ನಕ್ಕಿದ್ದಳು. ತಕ್ಷಣ ಸೋನಾಲಾಲನಿಗೆ ತಾನು ಹೋಗದಿದ್ದರ ಬಗ್ಗೆ ಪಶ್ಚಾತ್ತಾಪ ಉಂಟಾಗಿತ್ತು. ಆ ಕ್ಷಣ ಎಲ್ಲರ ಮುಂದೆಯೂ ಅಂಜಲಿ ದೇಸಾಯಿಯನ್ನು ಅಪ್ಪಿ ಮುದ್ದಿಸಬೇಕೆನಿಸಿತು. ಆದರೆ ಅದ್ಯಾಕೋ ಸಾಧ್ಯವಾಗಿರಲಿಲ್ಲ. ಒಂದು ವಾರ ಅಂಜಲಿ ದೇಸಾಯಿ ಬಹಳವಾಗಿ ಕಾಡಿದ್ದಳು. ಕ್ಲಾಸ್‌ಮೇಟ್ಸ್ ಎಲ್ಲರೂ ಅಂಜಲಿ ದೇಸಾಯಿಯ ಮದುವೆಗೆ ಹೋಗಿದ್ದರೂ ಸೋನಾಲಾಲ್ ಮಾತ್ರ ಮದುವೆಗೆ ಹೋಗಿರಲಿಲ್ಲ.

ಮೂರು ವರ್ಷಗಳ ನಂತರ ಇಂದು ಮ್ಯಾಥ್ಯೂ